ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳತಕ್ಕದ್ದರಲ್ಲಿ ಸತ್ಯಾಂಶ ಇದೆ. ಚಿಕ್ಕಮಗಳೂರು ಟೌನಿನಲ್ಲಿ ಕುಡಿಯುವ ನೀರಿನ ಬಗ್ಗೆ ದೊಡ್ಡ ಸಮಸ್ಯೆ ಇದೆ. ಅದು ಗೊತ್ತಿದೆ. ಹಿರೇಕಳಿಲೆ ಟ್ಯಾಂಕ್ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ವೈನ್‌ಟಿ ನೆನ್ಸ್‌ನ ವ್ಯಾಪ್ತಿಯಲ್ಲಿ ಇದೆ. ಈಗ ಮಾನ್ಯ ಸಾಗರ್ ಅವರು ಬಂದಿದ್ದಾರೆ. ಇವೊತ್ತು ಅವರ ಇಲಾಖೆಯ ಬೇಡಿಕೆಗಳು ಮುಗಿದ ಮೇಲೆ, ಮಾನ್ಯ ಸದಸ್ಯರನ್ನು ಕರೆಯಿಸಿ, ಇದರ ಬಗ್ಗೆ ಅತ್ಯಂತ ತುರ್ತು ಕ್ರಮ ತೆಗೆದುಕೊಳ್ಳುತ್ತಾರೆ, ನೀರಾವರಿ ಮತ್ತು ಕೆರೆಗೆ ಸಂಬಂಧಪಟ್ಟಂತೆ ನನ್ನ ಸಹಾಯ ಬೇಕಾದರೆ, ನಾನು ಅವರು ಇಬ್ಬರೂ ಕುಳಿತುಕೊಂಡು ಸಮಾಲೋಚನೆ ಮಾಡಿ, ಸಮಸ್ಯೆ ಬಗೆಹರಿಸಲಿಕ್ಕೆ ಏನು ಸಾಧ್ಯ ಇದೆ ಅದನ್ನು ಮಾಡ ಬೇಕಾಗುತ್ತದೆ.

(ii) ಹೊಸದುರ್ಗ ತಾಲ್ಲೂಕು ಕಂಚೀಪುರ ಗ್ರಾಮದ ರೈತರನ್ನು ಒಕ್ಕಲೆಬ್ಬಿಸಲು ಉದ್ದೇಶಿಸಿರುವುದು

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ರೈತರನ್ನು ಒಕ್ಕಲೆಬ್ಬಿಸಲುದ್ದೇಶಿಸಿರುವ ವಿಚಾರದ ಬಗ್ಗೆ ಕಂದಾಯ ಹಾಗೂ ಯೋಜನಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆಂಪಿರೇಗೌಡ.—ನಾನೂ ಮಾನ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ಸ. ನಂ. ೧೨೨ ಅರಣ್ಯ ಭೂಮಿಯಾಗಿದ್ದು ಸರ್ಕಾರದ ಆದೇಶದ ನಂ. ಎಎಫ್‌ಡಿ ೧೪೮ ಎಫ್‌ಜಿಎಲ್ ೬೪ ದಿನಾಂಕ ೧೬-೨-೬೪ರ ಅನ್ವಯ ೩೧೦ ಎಕರೆ ಬಿಡುಗಡೆಯಾಗಿ ಕಂದಾಯ ಇಲಾಖೆಯ ವಶಕ್ಕೆ ತೆಗೆದುಕೊಂಡಿರುತ್ತದೆ. ಸದರಿ ೩೧೦ ಎಕರೆ ಜಮೀನಿನಲ್ಲಿ ೧೧೦ ಎಕರೆ ಮಾತ್ರ ಸಾಗುವಳಿಗೆ ಯೋಗ್ಯವಾಗಿದ್ದರಿಂದ ದಿನಾಂಕ ೧-೬-೧೯೬೪ರಲ್ಲಿ ೫೫ ಜನಗಳಿಗೆ ತಲಾ ೨ ಎಕರೆ ಜಮೀನನ್ನು ಮಂಜೂರು ಮಾಡಲಾಗಿತ್ತು.

ಮೇಲ್ಕಂಡ ೫೫ ಜನರಲ್ಲಿ ೨೦ ಜನಗಳಿಗೆ ವಿಧಿಸಿದ್ದ ಕಿಮ್ಮತ್ತನ್ನು ಶೇ. ೭೫ ರಷ್ಟನ್ನು ಕಡಿಮೆ ಮಾಡಿ ಸಾಗುವಳಿ ಪತ್ರ ಪಡೆಯಲು ತಿಳುವಳಿಕೆ ಕೊಟ್ಟಾಗ್ಯೂ ಸಹ ಅವರುಗಳು ಬಂದು ಸಾಗುವಳಿ ಪತ್ರ ಪಡೆಯದಿರುವ ಕಾರಣ ಅವರ ಮಂಜೂರಾತಿಯನ್ನು ವಜಾ ಮಾಡಲಾಗಿದೆ. ಸದರಿ ಜಮೀನನ್ನು ಮಂಜೂರುದಾರರು ಹಾಗೂ ಮಂಜೂರಾತಿ ವಜಾ ಆಗಿರುವವರಾರು ಸಾಗುವಳಿ ಮಾಡಿರುವುದಿಲ್ಲ. ಆದ್ದರಿಂದ ಮಂಜೂರದಾರರನ್ನು ಒಕ್ಕಲೆಬ್ಬಿಸುವ ಬಗ್ಗೆ ಯಾವಕ್ರಮವನ್ನು ಕೈಗೊಂಡಿರುವುದಿಲ್ಲ ಹಾಗೂ ಒಕ್ಕಲೆಬ್ಬಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸದರಿ ವಿಷಯದಲ್ಲಿ ಕಾನೂನಿನ ರೀತ್ಯ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ ೧೯೬೪ರಲ್ಲಿ ಈ ಜನರಿಗೆ ತಲಾ ಎರಡು ಎಕರೆ ಜಮೀನು ಹಂಚಿಕೆಯಾಗಿ ಸಾಗುವಳಿ ಚೀಟಿಯನ್ನು ಎಲ್ಲರೂ ತೆಗೆದುಕೊಂಡಿದ್ದಾರೆ. ಹಣ ಕೂಡ ಕೊಟ್ಟಿದ್ದಾರೆ. ಅವರು ಆಪ್‌ಸೆಟ್ ಪ್ರೈಸ್ ೫೦ ರೂಪಾಯಿಗಳ ರೀತಿಯಲ್ಲಿ ಹಣವನ್ನು ಟ್ರೆಜರಿಗೆ ಕಟ್ಟಿದ್ದಾರೆ. ಸಾಗುವಳಿ ಚೀಟಿ ತೆಗೆದುಕೊಂಡಿದ್ದಾರೆ. ೧೫ ವರ್ಷದಿಂದ ವ್ಯವಸಾಯ ಮಾಡಿದ್ದಾರೆ. ಅವರು ನವ್ಮ ಜಮೀನು ಸರ್ವೆ ಮಾಡಿಕೊಡಿ ಎಂದು ಸರ್ವೆ ಡಿಪಾರ್ಟ್‌ಮೆಂಟಿಗೆ ಕೇಳಿದರೂ ಅವರು ಸರ್ವೆ ಮಾಡಿ ಕೊಟ್ಟಿಲ್ಲ. ಆದ್ದರಿಂದ, ಅವರು ಕೋರ್ಟಿಗೆ ಮೊರೆ ಹೋಗಿದ್ದಾರೆ. ಒಂದು ತಿಂಗಳಲ್ಲಿ ಜಮೀನನ್ನು ಅಳತೆ ಮಾಡಿಕೊಡಬೇಕೆಂದು ಆದೇಶ ಕೊಟ್ಟರೂ ಅಲ್ಲಿರತಕ್ಕ ರೈತರಿಗೆ ಇನ್ನೂ ಜಮೀನು ಅಳತೆ ಮಾಡಿ ಕೊಟ್ಟಿಲ್ಲ. ಇದೇ ಸಂದರ್ಭದಲ್ಲಿ ಶೆಟ್ಟಿನಹಳ್ಳಿ ರುದ್ರಪ್ಪ ಮತ್ತು ಶಂಭುಲಿಂಗಪ್ಪ ಎಂಬುವವರಿಗೆ ೨೦-೨೫ ಎಕರೆ ಜಮೀನನ್ನು ಅದೇ ಸರ್ವೆ ನಂಬರಿನಲ್ಲಿ ಕೇವಲ ಒಂದು ತಿಂಗಳಲ್ಲಿ ಅಳತೆ ಮಾಡಿಕೊಟ್ಟಿದ್ದಾರೆ. ಯಾರು ೧೫ ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದರು ಅವರಿಗೆ ಜಮೀನನ್ನು ಅಳತೆ ಮಾಡಿಕೊಟ್ಟಿಲ್ಲ. ಉದ್ದೇಶ ಏನೆಂದರೆ, ಯಾರು ೨೦-೨೫ ಎಕರೆ ಜಮೀನು ಅಳತೆ ಮಾಡಿಕೊಂಡಿದ್ದಾರೆ, ಅವರು ಈ ಜಮೀನು ಪಡೆಯಲಿಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಶಂಭುಲಿಂಗಪ್ಪ ಮತ್ತು ರುದ್ರಪ್ಪನವರಿಗೆ ಯಾವ ಆಧಾರದ ಮೇಲೆ ಜಮೀನು ಅಳತೆ ಮಾಡಿಕೊಟ್ಟರು? ಅವರು ಪೊಲಿಟಿಕಲ್ ಸಫರರ್ಸ್ ಅಥವಾ ಎಕ್ಸ್ ಸರ್ವಿಸ್‌ಮೆನ್ ಆಗಿದ್ದಾರೆಯೇ ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನನಗೆ ದೊರೆತ ಮಾಹಿತಿಯ ಪ್ರಕಾರ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಈಗ ಬೇರೆ ವಿವರಗಳನ್ನು ಕೊಟ್ಟಿದ್ದಾರೆ ಆ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ. ಆ ಜಮೀನು ಬೇರೆಯವರಿಗೆ ಕೊಡಲಿಕ್ಕೆ ಆಗುವುದಿಲ್ಲ, ಕೋರ್ಟ್ ಆಜ್ಞೆ ಪ್ರಕಾರ ನಾನು ಆಳತೆ ಮಾಡಿಕೊಡಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರ ಇದ್ದರೆ ಮಾನ್ಯ ಸದಸ್ಯರು ನನಗೆ ಕೊಡಲಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಾಮದಾಸ್ ಜಿ. (ಹೊಸದುರ್ಗ).—ಈಗ ತಾನೇ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರ ತಕ್ಕಂಥಾದ್ದನ್ನು ಒಪ್ಪತಕ್ಕದ್ದಲ್ಲ. ನನ್ನ ಹತ್ತಿರ ಸಂಬಂಧಪಟ್ಟ ರೆಕಾರ್ಡ್ಸ್ ಇವೆ. ಸಾಗುವಳಿ ಸ್ಕೆಚ್ ಇದೆ. ೧೯೬೯ರಲ್ಲಿ ಕೊಟ್ಟಿದ್ದುದು ಅದು. ಸರ್ವೆ ಇಲಾಖೆಯಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಸುಟ್ಟುಹಾಕಿದ್ದಾರೆ ಎಂದೂ ನಾನು ವಿಚಾರಿಸಿದಾಗ ತಿಳಿಯಿತು. ದಯವಿಟ್ಟು ಎನ್‌ಕ್ವೈರಿ ಮಾಡಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ವಿವರಗಳನ್ನು ಈಗಲೇ ಕಳಿಸಿಕೆ ಇಟ್ಟಲ್ಲಿ, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ. ಇದು ಗಂಭೀರವಾದ ವಿಷಯ.

ಶ್ರೀ ಕೆಂಪೀರೇಗೌಡ.—ಈಗ ೩೧೦ ಎಕರೆಯಲ್ಲಿ ಸುಮಾರು ೫೪ ಜನರಿಗೆ ತಲಾ ೨ ಎಕರೆಯಂತೆ ೧೦೮ ಎಕರೆ ಮಾತ್ರ ಹಂಚಲಾಗಿದೆ. ಆಮೇಲೆ ಶಂಭುಲಿಂಗಪ್ಪ ಮತ್ತು ರುದ್ರಪ್ಪ ಎಂಬಿಬ್ಬರಿಗೆ ತಲಾ ೨೫ ಎಕರೆ ಕೊಟ್ಟು ಆ ಜಾಗದಲ್ಲಿ ವ್ಯವಸಾಯ ಮಾಡುತ್ತಿದ್ದ ಬಡವರನ್ನು ಹೊರಹಾಕಕ್ಕಂಥ ಪ್ರಯತ್ನ ನಡೆದಿದೆ. ಆ ಬಡ ಜನರಿಗೆ ದಯವಿಟ್ಟು ಮಾನ್ಯ ಮಂತ್ರಿಗಳು ರಕ್ಷಣೆ ಕೊಟ್ಟು ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಸಾಗುವಳಿ ಮಾಡುತ್ತಿರುವವರಿಗೆ ರಕ್ಷಣೆ ಕೊಡುತ್ತೇನೆ. ವಿವರ ಬಂದ ಮೇಲೆ ತಪ್ಪಿತಸ್ಥರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಇವರು ಹೇಳುವುದರಲ್ಲಿ ಪ್ರಾಥಮಿಕ ಆರೋಪವೆಂದರೆ, ಇವರು ದುಡ್ಡು ಕೊಡಲಿಲ್ಲವೆಂದು, ಸಾಗುವಳಿ ಮಾಡುತ್ತಿರಲಿಲ್ಲವೆನ್ನುವುದು. ಆದರೆ ೫೦ ಜನರೂ ದುಡ್ಡು ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಪಡೆದಿದ್ದಾರೆ. I will read this letter dated 13-5-1985 ;—

"From : the Revenue Commissioner and Secretary to Government, Government of Karnataka, Revenue Department.

To : The Tahsildar, Hosadurga Taluk, Hosadurga, Chitradurga District.

Sub : Non measurement of land for more than 15 years by the Survey Department in Survey No. 122 of Kanchepura Village, Mathodu Hobli, Hosadurga Taluk.

Ref : Letter No. ..... Dated 2-11-1984/85 addressed to you from the Dy. Commissioner, Chitradurga.

With reference to the above, I am directed to state that the Director, Survey Settlement and land Records, B'lore in his letter number dated 21-2-1985 has reported to the Government that the original darkasth podi records have not at all been received by the Survey Department even after so many references made to you in this behalf. However, it is reported that one such fils has been received in the

Office of the Asst. Director of Land Records, Davangere on 27-6-1983 from you without saguvali chit, revenue sketch, grant order etc., As such, the same was sent back on 5-6-1984 for supply of copies of the above documents and without podi records, no action can be taken by the Revenue Department."

ಇದು ರೆವಿನ್ಯೂ ಕಮೀಷನರ್‌ರವರು ಅಲ್ಲಿಯ ತಹಸೀಲ್ದಾರ್‌ರವರಿಗೆ ಬರೆದಿರತಕ್ಕ ಕಾಗದ. ನನ್ನ ಮಿತ್ರರು ಹೇಳಿದ ಹಾಗೆ ಪೂರ್ಣವಾದ ರೆಕಾರ್ಡ್ಸ್ ಏನಿದೆ ಅವುಗಳನ್ನೆಲ್ಲಾ ಸುಟ್ಟು ಹಾಕಿದ್ದಾರೆ. ಇವರಲ್ಲಿ ಅನೇಕ ರೆವಿನ್ಯೂ ಡಿಪಾರ್ಟ್‌ಮೆಂಟ್ ಜನ ಶಾಮೀಲಾಗಿದ್ದಾರೆ. ಸರ್ಕಾರಕ್ಕೆ ಅಧಿಕಾರಿಗಳು ಯಾವ ರೀತಿಯ ಉತ್ತರ ಕೊಡುತ್ತಾರೋ, ಈಗಾಗಲೇ ಹೇಗೆ ಈ ರೀತಿಯ ಉತ್ತರ ಕೊಟ್ಟಿದ್ದಾರೋ ಗೊತ್ತಿಲ್ಲ. ನನ್ನ ಹತ್ತಿರ ಸ್ಯಾಂಕ್ಷನ್ ಮಾಡಿರುವ ಸೈಟ್, ಅವರ ಹೆಸರೂ ಇದೆ. ತಮ್ಮ ಬಳಿ ಇಪನ್ನು ಕಳುಹಿಸಿ ಕೊಡುತ್ತೇನೆ. ಈ ಜಮೀನನ್ನು ಶಂಭುಲಿಂಗಪ್ಪ ಮತ್ತು ರುದ್ರಪ್ಪ ಹೊಡೆದುಕೊಳ್ಳಬೇಕೆಂದು ಮಾಡುತ್ತಿದ್ದಾರೆ. ಅದನ್ನು ತಪ್ಪಿಸಿ, ರೈತರ ಸರ್ಕಾರವೆಂದು ಹೇಳಿಕೊಳ್ಳುವ ನಮ್ಮ ಜನತಾ ಸರ್ಕಾರ ರೈತರಿಗೆ ರಕ್ಷಣೆ ಕೊಡಬೇಕು. ಜಮೀನಿನಿಂದ ಅತಿಕ್ರಮವಾಗಿ ಓಡಿಸಿರುವವರಿಗೆ ಮತ್ತೆ ಅವರ ವಶಕ್ಕೇ ಜಮೀನನ್ನು ಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಹೆಮ್ಮಿಗೆಯವರೇ ನೀವು ಪುರಾಣ ಹೇಳಬೇಡಿ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಇದು ಪುರಾಣವಲ್ಲ, ರೈತರಿಗೆ ಸಂಬಂಧಪಟ್ಟಿದ್ದುದು.

ಶ್ರೀ ಸಿ. ಬೈರೇಗೌಡ.—ಅವರು ಹೇಳುತ್ತಿರುವುದು ಪುರಾಣವಲ್ಲ, ವೇದಾಂತ ಸ್ವಾಮಿ.

ಶ್ರೀ ಕೆಂಪೀರೇಗೌಡ.—ಇದು ರೈತರ ಕಷ್ಟಕಾರ್ಪಣ್ಯಗಳು, ಸಮಸ್ಯೆಗಳು ಬೈರೇಗೌಡರಿಗೆ ಅರ್ಥವಾಗುವುದಿಲ್ಲ ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಶ್ರೀಮಾನ್ ಬೈರೇಗೌಡರು ಯಾವತ್ತಾದರೂ ರೈತರಿಗಾಗಿ ಹೋರಾಟ ಮಾಡಿದ್ದಾರಿಯೇ ? ರೈತರ ನೋವು ಆತಂಕ ಅವರಿಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ಇವರು ವೇದಾಂತ ಹೇಳಿಕೊಂಡು ಇದ್ದವರು. ಇವರಿಗೆ ಭತ್ತ ನಾಟಿ ಮಾಡುವುದು, ಬೀಜ ಬಿತ್ತುವುದು ಏನಾದರೂ ಗೊತ್ತೇ ?

ಶ್ರೀ ವೇದಾಂತ ಹೆಮ್ಮಿಗೆ.—ಈ ಸಮಸ್ಯೆಯನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಇದರ ಬಗ್ಗೆ ವಿಚಾರಣೆ ನಡೆಯಿಸಬೇಕು. ಬಡ ರೈತರಿಗೆ ತೊಂದರೆ ಕೊಡುವುದರಲ್ಲಿ ಯಾವ ಅಧಿಕಾರಿ ವರ್ಗ ಶಾಮೀಲಾಗಿದೆಯೋ ಅವರನ್ನು ಕೆಲಸದಿಂದ ತೆಗೆದುಹಾಕಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಹೆಮ್ಮಿಗೆಯವರೇ, ನೀವು ವೇದಾಂತ ಹೇಳಿಕೊಂಡು ಇದ್ದವರು. ನೀವು ಹೇಳುತ್ತೀರಿ ಇದೆಲ್ಲ ಉಳಿದವರಿಗೆ ಅರ್ಥವಾಗುವುದಿಲ್ಲವೆಂದು, ಅದು ಹೇಗೆ ? ಎಂದಾದರೂ ನೀವು ಬೈರೇಗೌಡರಂ ಹೇಳಿದ ಹಾಗೆ ಉಳಿಮೆ ಮಾಡಿದ್ದೀರಾ ? ಕಳ್ಳೆಲೆದ್ದಿದ್ದೀರಾ ?

ಶ್ರೀ ವೇದಾಂತ ಹೆಮ್ಮಿಗೆ —ಅದನ್ನು ಬಿಡಿ. ಇದು ನಮ್ಮ ನಮ್ಮ ವಿಷಯ, ದಯವಿಟ್ಟು ಬೊಮ್ಮಾಯಿಯವರು ಸಚಿವರಾಗಿ ನನಗೆ ಕೊಟ್ಟಿರುವ ಉತ್ತರ ಬಹಳ ನೀರಸವಾಗಿದೆ. ಇಬ್ಬರು ೨೫ ಎಕರೆ ತಲಾ ಭೂಮಿಯನ್ನು ಹೊಡೆಯಲು ಪ್ರಯತ್ನ ಮಾಡಿದ್ದಾರೆ. ಇದು ಹೇಗೆ ಸಾಧ್ಯವಾಯಿತು ? ಕಾರಣಗಳೇನು ಎಂಬುದನ್ನೆಲ್ಲ ಪತ್ತೆ ಮಾಡಿ, ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾತನಾಡಿರುವ ಸದಸ್ಯರು ಇದರ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ನಾನು ಹೇಳುತ್ತೇನೆ, ಸಾಗುವಳಿ ಮಾಡತಕ್ಕಂಥವರಿಗೆ ರಕ್ಷಣೆ ಕೊಡುತ್ತೇನೆ. ತನಿಖೆ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಮತ್ತು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.